ಮೌಲ್ಯಮಾಪನ ದರವು ಹೆಚ್ಚಾಗಿಲ್ಲವೆಂದು ಪ್ರತಿಭಟಿಸಿದರು. ಮೌಲ್ಯಮಾಪನ ದರವನ್ನು ರೂ. 2-50 ರಿಂದ 4-00 ರೂಪಾಯಿಗಳಿಗೆ ಹೆಚ್ಚಿಸಿ, ದಿನಾಂಕ 16-6-1996 ರಂದು ಆದೇಶ ನೀಡಿದ ನಂತರ ಮೌಲ್ಯಮಾಪನ ಕಾರ್ಯವನ್ನು ಪ್ರಾರಂಭಿಸಿದರು.

3) ಸಾಮಾನ್ಯವಾಗಿ 10 ದಿನಗಳಲ್ಲಿ ಮುಗಿಯಬೇಕಾಗಿದ್ದ ಮೌಲ್ಯಮಾಪನ ಕಾರ್ಯವು ಈ ಸಮಸ್ಯೆಯಿಂದಾಗಿ 20 ದಿನಗಳ ವರೆಗೆ ವಿಸ್ತರಿಸಬೇಕಾಯಿತು.

ಟಿ.ಸಿ.ಹೆಚ್. ಪರೀಕ್ಷಾ ಫಲಿತಾಂಶವನ್ನು ಸಾಮಾನ್ಯವಾಗಿ ಪರೀಕ್ಷೆ ನಡೆದ ಎರಡು ತಿಂಗಳ ನಂತರ ಪ್ರಕಟಿಸಲಾಗುತ್ತಿತ್ತು.

ಆದರೆ ಈ ಬಾರಿ ಮೇಲ್ಕಂಡ ಕಾರಣಗಳಿಂದ ಆಗಸ್ಟ್ ಮೊದಲ ವಾರದಲ್ಲಿ ಪ್ರಕಟಿಸಲು ಕ್ರಮ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲು ಇಚ್ಛಿಸುತ್ತೇನೆ.

03-20 ಪಿ. ಎಂ.

(ಅ) ಗದಗಿನ ವಿದ್ಯಾದಾನ ಸಮಿತಿ ಪದವಿ ಪೂರ್ವ ಮಹಾವಿದ್ಯಾಲಯದ ನಿವೃತ್ತ ಪ್ರಾಂಶುಪಾಲರಿಗೆ ಕೆ.ಸಿ.ಎಸ್.ಆರ್. 42 (ಬಿ) ಅನ್ವಯ ವೇತನ ಸೌಲಭ್ಯ.

ಶ್ರೀ ಡಿ. ಆರ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೇ, ಗದಗಿನ ವಿದ್ಯಾದಾನ ಸಮಿತಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಪದೋನ್ನತಿ ಹೊಂದಿ ಪ್ರಾಂಶುಪಾಲರಾಗಿ ನಿವೃತ್ತರಾದ ಶ್ರೀ ಎನ್. ಜಿ. ಹುಲಗಿ, ಶ್ರೀ ಎಸ್. ಎಸ್. ಸಾವುಕಾರ, ಹಾಗೂ ಶ್ರೀಮತಿ ಎಲ್. ಎಚ್. ದೂದಿಹಳ್ಳಿ ಅವರಿಗೆ ಸರಕಾರಿ ಆಜ್ಞೆ ನಂ. ಇಡಿ : 17 ಎಸ್.ಎಲ್.ಬಿ. 80 ದಿನಾಂಕ 11-5-82 ರ ಅನ್ವಯ ಕೆಸಿಎಸ್ಆರ್ 42 ಬಿ. ಅನ್ವಯ ದೊರೆಯಬೇಕಾದ ವೇತನ ನಿಗದಿ ಸೌಲಭ್ಯ ದೊರೆತಿಲ್ಲ. ಇದೇ ಸಂಸ್ಥೆಯಲ್ಲಿ ಇವರಿಗಿಂತ ನಂತರ ನಿವೃತ್ತರಾದ ಶ್ರೀ ವಿ. ಆರ್. ಹುಯಿಲಗೋಳ ಅವರಿಗೆ 42 (ಬಿ) ಅನ್ವಯ ವೇತನ ನಿಗದಿಯಾಗಿ ಸೌಲಭ್ಯ ನೀಡಲಾಗಿದೆ. ಇವರಿಗಿಂತ ಮೊದಲು ನಿವೃತ್ತಿಯಾಗಿ ದಶಕಗಳೇ ಸಂದಿದ್ದರೂ ಮೇಲ್ಕಾಣಿಸಿದ ಪ್ರಾಂಶುಪಾಲರಿಗೆ ಅವರು ಹತ್ತಾರು ಬಾರಿ ಮನವಿ ಸಲ್ಲಿಸಿದ್ದರೂ, ಶಿಕ್ಷಣ ಇಲಾಖೆ ಶಿಫಾರಸ್ಸು ಮಾಡಿದ್ದರೂ ಸಹ ಸೌಲಭ್ಯ ನೀಡದಿರುವ ಅನ್ಯಾಯದ ಬಗ್ಗೆ ಶಿಕ್ಷಣ ಹಾಗೂ ಹಣಕಾಸು ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ :- (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ವಿದ್ಯಾದಾನ ಸಮಿತಿ, ಗದಗ್ ಜಿಲ್ಲೆ, ಧಾರವಾಡ, ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ವಿ.ಡಿ.ಎಸ್. ಸಾವುಕಾರ, ಸಹ ಶಿಕ್ಷಕರು ಹಾಗೂ ಶ್ರೀ ಎನ್. ಜಿ. ಹುಲಗಿ, ಸಹ ಶಿಕ್ಷಕರು ಇವರುಗಳು ಕ್ರಮವಾಗಿ ದಿನಾಂಕ : 11-4-1982 ಹಾಗೂ 15-4-1980 ರಂದು ಪ್ರಾಚಾರ್ಯರಾಗಿ ಬಡ್ತಿ ಹೊಂದಿದ್ದು, ಕ್ರಮವಾಗಿ ದಿನಾಂಕ : 31-1-1989 ಹಾಗೂ 10-4-1982 ರಂದು ನಿವೃತ್ತಿ ಹೊಂದಿರುತ್ತಾರೆ. ಕರ್ನಾಟಕ ಸೇವಾ ನಿಯಮ 42 (ಬಿ) ಸೌಲಭ್ಯವನ್ನು ದಿನಾಂಕ : 11-5-82 ರಿಂದ ವಿಸ್ತರಿಸಿದ ಕಾರಣದಿಂದ ಹಾಗೂ ಈ ಶಿಕ್ಷಕರುಗಳು ಈ ಸೌಲಭ್ಯವನ್ನು ಇವರುಗಳಿಗೆ ವಿಸ್ತರಿಸಿರುವುದಿಲ್ಲ. ಇದೇ ರೀತಿ ವಿ.ಡಿ.ಎಸ್. ಸಂಯುಕ್ತ ಪದವಿ ಪೂರ್ವ ಕಾಲೇಜು,

ಗದಗ, ಇಲ್ಲಿ ಶ್ರೀಮತಿ ಎಲ್. ಎಚ್. ದೂದೀಹಳ್ಳಿ, ಸಹ ಶಿಕ್ಷಕರಾಗಿ ಪ್ರೌಢ ಶಾಲಾ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದು ದಿನಾಂಕ 2-6-80 ರಿಂದ ಟೆನ್ಯೂರ್ ಆಧಾರದ ಮೇಲೆ ಉಪನ್ಯಾಸಕರಾಗಿ ನೇಮಕಾತಿ ಹೊಂದಿದ್ದರು. ಆದ್ದರಿಂದ, ಇವರ ನೇಮಕಾತಿಯನ್ನು ಬಡ್ತಿ ಎಂದು ಪರಿಗಣಿಸದೇ ಇದ್ದುದರಿಂದ ಕರ್ನಾಟಕ ಸರ್ಕಾರಿ ಸೇವಾ ನಿಯಮ 42 (ಬಿ) ಅನ್ವಯ ವೇತನ ನಿಗದಿಪಡಿಸಿಲ್ಲ. ಆದರೆ, ಪ್ರಾಚಾರ್ಯರ ಹುದ್ದೆಗೆ ದಿನಾಂಕ : 1-11-83 ರಿಂದ ಬಡ್ತಿ ನೀಡಿದ್ದು ಸದರಿ ಹುದ್ದೆಯಲ್ಲಿ ಇವರ ವೇತನವು ನಿಯಮ 42 (ಬಿ) ಪ್ರಕಾರ ನಿಗದಿಗೊಳಿಸಲಾಗಿದೆ.

ಶ್ರೀಮತಿ ದೂದೀಹಳ್ಳಿ, ಇವರಿಗೆ ಸಹ ಶಿಕ್ಷಕರ ಹುದ್ದೆಯಿಂದ ಉಪನ್ಯಾಸಕರ ಹುದ್ದೆಗೆ ಮಾಡಲಾದ ನೇಮಕವನ್ನು ಬಡ್ತಿಯೆಂದು ಪರಿಗಣಿಸಿ ನಿಯಮ 42 (ಬಿ) ಪ್ರಕಾರ ವೇತನ ನಿಗದಿಪಡಿಸುವಂತೆ ಕೋರಿದ್ದಾರೆ. ಈ ಬಗ್ಗೆ ಹಾಗೂ ಶ್ರೀ ಎಸ್. ಜಿ. ಹುಲಗಿ ಮತ್ತು ಶ್ರೀ ಎಸ್.ಎಸ್. ಸಾವುಕಾರ್, ಇವರುಗಳಿಗೂ ಸಹ ಕ.ಸ.ಸೇ.ನಿ. 42 (ಬಿ) ಪ್ರಕಾರ ವೇತನ ನಿಗದಿಗೊಳಿಸುವ ಬಗ್ಗೆ ಆರ್ಥಿಕ ಇಲಾಖೆಯ ಸಹಮತಿಯನ್ನು ಕೋರಲಾಗಿತ್ತು. ಆರ್ಥಿಕ ಇಲಾಖೆಯು ತನ್ನ ಅನಧಿಕೃತ ಟಿಪ್ಪಣಿ ಸಂ : ಎಫ್‌ಡಿ 1449 ವೆಚ್ಚ- 8: 95 ದಿನಾಂಕ : 22-4-96 ರಲ್ಲಿ ಇಂತಹ ಎಷ್ಟು ಪ್ರಕರಣಗಳಿವೆ ಮತ್ತು ಆರ್ಥಿಕ ಹೊಣೆಗಾರಿಕೆ ಹಾಗೂ ಇವರುಗಳು ಪ್ರಾಂಶುಪಾಲರಾಗಿ ಕೆಲಸ ನಿರ್ವಹಿಸಲು ಆದೇಶಿಸಿದ ನಿರ್ದಿಷ್ಟವಾದ ಆದೇಶಗಳನ್ನು ಒದಗಿಸುವಂತೆ ಕೋರಿದೆ. ಈ ಬಗ್ಗೆ ಎಲ್ಲಾ ವಿಭಾಗದ ಸಹ ನಿರ್ದೇಶಕರಿಂದ ಮಾಹಿತಿ ಕೋರಲಾಗಿದ್ದು ಈ ಮಾಹಿತಿ ಬಂದ ನಂತರ ಆರ್ಥಿಕ ಇಲಾಖೆಯ ಸಹಮತಿ ಪಡೆದು ಇವರ ವೇತನ ನಿಗದಿಪಡಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

(ಇ) ಹಿರೇಕೆರೂರು ತಾಲ್ಲೂಕು ನೇಷ್ಮಿ ಸರಕಾರಿ ಪ್ರೌಢಶಾಲೆಯಲ್ಲಿ ಖಾಲಿ ಇರುವ ಸಿಪಾಯಿ ಹುದ್ದೆ ಭರ್ತಿ.

ಶ್ರೀ ಜಗದೀಶ್ ಶೆಟ್ಟರ್ (ಯು. ಬಿ. ಬಣಕಾರ್‌ರವರ ಪರವಾಗಿ) :- ಮಾನ್ಯ ಉಪಧ್ಯಾಕ್ಷರೇ, ಹಿರೇಕೆರೂರು ತಾಲ್ಲೂಕು ನೇಷ್ಮಿ ಸರಕಾರಿ ಪ್ರೌಢಶಾಲೆಯಲ್ಲಿ ಇರುವ 4 ಸಿಪಾಯಿ ಹುದ್ದೆಗಳು ಖಾಲಿ ಇದ್ದು ಕಳೆದ 2 ವರ್ಷದಿಂದ ಶಾಲೆಯ ಮಕ್ಕಳೇ ಆ ಕೆಲಸಗಳನ್ನು ಮಾಡುತ್ತಾ ಬಂದಿದ್ದು ಕೂಡಲೇ ಆ 4 ಸಿಪಾಯಿ ಹುದ್ದೆಗಳನ್ನು ತುಂಬುವಂತೆ ನೇಷ್ಮಿ ಗ್ರಾಮಸ್ಥರು ಮನವಿ ಸಲ್ಲಿಸಿದ್ದು ಇರುತ್ತದೆ. ಹಾಗೂ ಬೇಗನೆ ಆ ಕಾರ್ಯ ಮಾಡಿದಿದ್ದರೆ ಕಟ್ಟಡದ ಉದ್ಘಾಟನಾ ಸಮಯದಲ್ಲಿ ಪ್ರತಿಭಟನೆ ಮಾಡುವುದಾಗಿ ಎಚ್ಚರಿಸಿದ್ದಾರೆ. ಕಾರಣ ಕೂಡಲೇ ಆ ನಾಲ್ಕು ಸಿಪಾಯಿ ಹುದ್ದೆಗಳಲ್ಲಿ ಎರಡನ್ನಾದರೂ ನೇಮಿಸಲು ಕ್ರಮ ತೆಗೆದುಕೊಳ್ಳಲು ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರನ್ನು ವಿನಂತಿಸುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ :- ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ಮಾನ್ಯ ಉಪಾಧ್ಯಾಕ್ಷರೇ,.....

ಡಿ. ಗ್ರೂಪ್ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಆರ್ಥಿಕ ಮಿತವ್ಯಯ ಆದೇಶಗಳು ಜಾರಿಯಲ್ಲಿರುವ ಕಾರಣ ಸಾಧ್ಯವಿಲ್ಲ. ಅನುಕಂಪದ ಆಧಾರದ